**ಸಿ.ಸಿ. ನಂಬರ್ः466/2015**
**ಸಿ.ಡಬ್ಲ್ಯೂः2 ಪಿ.ಡಬ್ಲ್ಯೂः9**

ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,

ಧಾರವಾಡ

ಸಿ.ಸಿ. ನಂಬರ್ः **466/2015**

| | |
|---|---|
| ಸಾಕ್ಷಿಯ ಹೆಸರು | : ಬಾಬು |
| ತಂದೆಯ ಹೆಸರು | : ರಾಮು ರಾಠೋಡ |
| ವಯಸ್ಸು | : 56 ವರ್ಷ |
| ಉದ್ಯೋಗ | : ಶಿಕ್ಷಕ |
| ವಾಸಸ್ಥಳ | : ಧಾರವಾಡ |

ದಿः **19-06-2025** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆः ಮಾನ್ಯ ಸ.ಸ.ಅ ರವರಿಂದः

ನನಗೆ ಚಾಸಾ.3 ರವರ ಪರಿಚಯವಿದೆ. ದಿः26-07-2014 ರಂದು ಚಾಸಾ.1 ಸರಗಳ್ಳತನ ಆಗಿದೆ ಎಂದು ದೂರನ್ನು ನೀಡಿದ್ದರು. ನನ್ನನ್ನು ಪಂಚನಾಮೆಗಾಗಿ ಕರೆದಿದ್ದರು. ಸದರಿ ಪಂಚನಾಮೆ ಕಾಲಕ್ಕೆ ನಾನು ಹಾಗೂ ಚಾಸಾ.3 ರವರು ಹಾಜರು ಇದ್ದರು. ಚಸಾ.1 ರವರು ಸಹ ಇದ್ದರು. ಪಂಚನಾಮೆಯನ್ನು ಬರೆಸಿದ್ದರು, ನನಗೆ ಓದಿ ಹೇಳಿದರು. ನಾನು ಸಹಿ ಹಾಕಿರುತ್ತೇನೆ. ಪಂಚನಾಮೆಯನ್ನು ಬೆಳಗ್ಗೆ 9.30 ರಿಂದ 10.30 ರವರೆಗೆ ಪಂಚನಾಮೆ ಮಾಡಿರುತ್ತಾರೆ. ಸ್ಥಳವನ್ನು ಚಾಸಾ.1 ರವರು ತೋರಿಸಿರುತ್ತಾರೆ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಿದ್ದು . ಸಾಕ್ಷಿಯ ಸಹಿಯನ್ನು ನಿಪಿ. 6(ಬಿ) ಎಂದು ಗುರುತಿಸಲಾಯಿತು.

ಸಿ.ಸಿ. ನಂಬರ್‌:**466/2015**
ಸಿ.ಡಬ್ಲ್ಯು:**2** ಪಿ.ಡಬ್ಲ್ಯು:**9**

ಪಾಟೀಸವಾಲು: ಆರೋಪಿ ನಂ.**1** ರವರ ಪರವಾಗಿ

ಚಾಸಾ.1 ರವರು ನಮ್ಮ ಓಣಿಯಲ್ಲಿ ಇರುತ್ತಾರೆ, ಸಮಾರು 10 ವರ್ಷಗಳಿಂದ ಪರಿಚಯ. ಪೋಲಿಸರು ಪಂಚರಾಗಲು ಕೇಳಿಕೊಂಡಿದ್ದರಿಂದ ಪಂಚರಾಗಿರುತ್ತೇವೆ. ನನಗೆ ಲಿಖಿತವಾಗಿ ಯಾವುದೇ ನೋಟಿಸು ನೀಡಿಲ್ಲ. ನಾನು 10.30 ರಿಂದ 11.00 ಗಂಟೆ ಸಮಯಕ್ಕೆ ಅಲ್ಲಿ ಹೋಗಿದ್ದೆ. ಪಂಚನಾಮೆ ಬರೆದಿಟ್ಟಿದ್ದರು, ನಾನು ಓದಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ.3 ರವರು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಸಾ.1 ರವರಿಗೆ ನಾನು ಆತ್ಮೀಯವಾಗಿದ್ದರಿಂದ ಅಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀಸವಾಲು: ಆರೋಪಿ ನಂ.**2** ರವರ ಪರವಾಗಿ

ಆರೋಪಿ ನಂ.2 ರ ಪರ ವಕೀಲರು ಆರೋಪಿ ನಂ.1 ರವರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.　　　　ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.

ಸಿ.ಸಿ. ನಂಬರ್ಃ**466/2015**
ಸಿ.ಡಬ್ಲ್ಯುಃ**2** ಪಿ.ಡಬ್ಲ್ಯುಃ**9**